01-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 1

S.S.L.C. MODEL QUESTION PAPER - 1 : 2026 - 27

ವಿಷಯ : ಪ್ರಥಮ ಭಾಷೆ – ಕನ್ನಡ

Subject : First Language — KANNADA

ವಿಷಯ ಸಂಕೇತ : 01-K | **Subject Code : 01-K**

ಸಮಯ : 3 ಗಂಟೆ 15 ನಿಮಿಷಗಳು] | [Time : 3 Hours 15 Minutes

ಗರಿಷ್ಠ ಅಂಕಗಳು : 100] | [Max. Marks : 100

ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **6 X 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವಸ್ವರಗಳ ಸಂಖ್ಯೆ

   (ಎ) ೦೫

   (ಬಿ) ೦೬

   (ಸಿ) ೦೭

   (ಡಿ) ೦೯

2. 'ಮಹರ್ಷಿ' ಪದವು ಈ ಸಂಧಿಗೆ ಸೇರಿದೆ

   (ಎ) ಯಣ್

   (ಬಿ) ವೃದ್ಧಿ

   (ಸಿ) ಗುಣ

   (ಡಿ) ಸವರ್ಣದೀರ್ಘ

3. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು

   (ಎ) ಅಲ್ಪವಿರಾಮ

   (ಬಿ) ಅರ್ಧವಿರಾಮ

   (ಸಿ) ಆವರಣ

   (ಡಿ) ಉದ್ಧರಣ

4. 'ತಿಂದಾನು' ಪದವು ಈ ಕ್ರಿಯಾಪದಕ್ಕೆ ಸೇರಿದೆ

   (ಎ) ಸಂಭಾವನಾರ್ಥಕ

   (ಬಿ) ವಿಧ್ಯರ್ಥಕ

   (ಸಿ) ಸಾಮಾನ್ಯಾರ್ಥಕ

   (ಡಿ) ನಿಷೇಧಾರ್ಥಕ

5. ಪ್ರಥಮಾ ವಿಭಕ್ತಿಯ ಕಾರಕಾರ್ಥವಿದು

   (ಎ) ಕರ್ಮಾರ್ಥ

   (ಬಿ) ಕರಣಾರ್ಥ

   (ಸಿ) ಕರ್ತ್ರಾರ್ಥ

   (ಡಿ) ಸಂಪ್ರದಾನ

6. 'ಸೊಲ್ಗೇಳಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

   (ಎ) ಕ್ರಿಯಾ

   (ಬಿ) ತತ್ಪುರುಷ

   (ಸಿ) ಕರ್ಮಧಾರಯ

   (ಡಿ) ಗಮಕ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : **4 X 1 = 4**

7. ಪಾದುಕಾ : ಹಾವುಗೆ : : ಪ್ರಸಾದ : ..... .
8. ಪರ್ವತ : ರೂಢನಾಮ : : ಪಂಡಿತ : ..... .
9. ಸೊಗಸಾಗಿ : ಸಾಮಾನ್ಯಾರ್ಥಕಾವ್ಯಯ : : ಸಾಕು : ..... .
10. ಓಡುವ : ಕೃದಂತನಾಮ : : ಅಂಜಿಕೆ : ..... .

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **7 X 1 = 7**

11. ಮನುಷ್ಯನಿಗೆ ಲೆಕ್ಕವಿಡುವ ಆವಶ್ಯಕತೆ ಯಾವಾಗ ಉಂಟಾಯಿತು?
12. ಹುಲಿಗೆ ಪರಮಾನಂದವಾಗಲು ಕಾರಣವೇನು?
13. ಪ್ರವಾಸವನ್ನು ಕುರಿತು ಬೇಕನ್ನನು ಹೇಳಿದ ಮಾತು ಯಾವುದು?
14. ರಾಜಗೃಹ ಪಟ್ಟಣದ ಅರಸ ಯಾರು?
15. ಹಲಗಲಿಯ ಗುರುತು ಉಳಿಯದಂತಾದದು ಏಕೆ?
16. ಪರಶುರಾಮರು ದ್ರೋಣರಿಗೆ ಯಾವುದರಲ್ಲಿ ಅರ್ಘ್ಯವನ್ನು ನೀಡಿದರು?
17. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **10 X 2 = 20**

18. ಕನ್ನಡ ಭಾಷೆ ಹದಗೊಂಡ ಬಗೆಯನ್ನು ತಿಳಿಸಿ.
19. ನೆಹರು ಅವರು ಸರ್ ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಹೇಳಿದ ಮಾತುಗಳಾವುವು?
20. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?
21. ರಾಜಸಭೆಯಲ್ಲಿ ಅಗ್ನಿಭೂತಿ ವಾಯುಭೂತಿಯರನ್ನು ಮೂರ್ಖರೆಂದು ತೀರ್ಮಾನಿಸಲು ಕಾರಣವೇನು?
22. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
23. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?
24. ಭಗತ್‌ಸಿಂಗ್ ಹೇಗೆ ಅಮರನಾದನು?
25. ಬಾಳಿನಲ್ಲಿ ತೃಪ್ತಿ ದೊರೆಯಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ?
26. ಜ್ಞಾನಿ ಅಜ್ಞಾನಿಗಳ ಸಂಗದ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವನ್ನು ಬರೆಯಿರಿ.
27. ಪೈಗಳು ಪ್ರಾಸ ತೊರೆಯಲು ನಿಶ್ಚಯಿಸಿದ ಸಂದರ್ಭವನ್ನು ವಿವರಿಸಿ.

V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : **2 X 3 = 6**

28. ಎ. ಎನ್. ಮೂರ್ತಿರಾವ್
29. ದ. ರಾ. ಬೇಂದ್ರೆ

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 X 3 = 3

30. ಬಾಲಕರು ನೀವೆನ್ನ ಮಾತನು
ಕೇಳಿಯುದಕವ ಕುಡಿವುದೆನೆ ಭೂ
ಪಾಲ ನಿನ್ನವರೆನ್ನ ಮಾತನು ಕೇಳಿ ಮನ್ನಿಸದೆ

VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 X 3 = 3

31. "ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತಕುಲದ ನೂರೈವರು ಬಾಲಕರು ಬಿದ್ದರು."

VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 X 3 = 3

32. ಕೂಡಿಬಾಳಿದರೆ ಸ್ವರ್ಗಸುಖ

ಅಥವಾ

ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ

IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 X 3 = 18

33. "ಕೈಗಾರಿಕೀಕರಣ ಇಲ್ಲವೆ ಅವನತಿ"
34. "ಅವರು ಅಂದು ನುಡಿದದ್ದು ಇಂದು ನುಡಿದಂತೆ ಕೇಳಿಸುತ್ತಿದೆ."
35. "ಈ ಮಳೆಯಲ್ಲಿ ಈ ಕತ್ತಲಲ್ಲಿ ನಾನು ಯಾರನ್ನು ಕರೆಯಲಿ?"
36. "ಪಾಂಡವರೊಳಿಜಿದು ಛಲಮನೆ ಮೆರೆವೆಂ"
37. "ಬೇರೆಬಣ್ಣವನೆ ಕಾಣೆ"
38. "ಎರೆದಂ ಶ್ರುತಪಾರಗನೆಂತು ಸಂತಸಂ ಬಡಿಸುವೆನ್"

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 X 4 = 4

39. ಕಲುಷಿತವಾದೀ .....
.....
.....
..... ಮುಟ್ಟೋಣ

ಅಥವಾ

ಮತಗಳೆಲ್ಲವೂ .....
.....
.....
..... ಬಿತ್ತೋಣ

XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : 1 X 4 = 4

40. ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ
ಜನಪ ಕೌರವ ಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರವೆರಡು ಸಂತತಿ
ಯೆನಿಸಲೊಲ್ಲದೆ ನೀನು ದುರಿಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 X 4 = 8

41. ಮತಂಗಾಶ್ರಮದ ಬಳಿ ರಾಮಲಕ್ಷ್ಮಣರು ಸೀತೆಯನ್ನು ನೆನೆದು ದುಃಖಿಸಿದ ಪರಿ ಹಾಗೂ ಪರಸ್ಪರರು ಸಮಾಧಾನ ಪಡಿಸಿಕೊಂಡ ಬಗೆಯನ್ನು ಬರೆಯಿರಿ.

ಅಥವಾ

ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವಾದ ಅಂಶಗಳನ್ನು ಸಂಗ್ರಹಿಸಿ ಬರೆಯಿರಿ.

ಅಥವಾ

ಲವನಲ್ಲಿದ್ದ ಕ್ಷಾತ್ರಗುಣ 'ವೀರಲವ' ಪದ್ಯದಲ್ಲಿ ವ್ಯಕ್ತಗೊಂಡಿರುವುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 X 4 = 4 (2+2)

43. ದೇಶಹಿತವೇ ದೊರೆಯ ವ್ರತ. ಪ್ರಜಾಪಾಲನೆಯೇ ಆದ್ಯ ಕರ್ತವ್ಯ. ಧರ್ಮಶಾಸ್ತ್ರದ ದಾಸನಾಗಿ, ನ್ಯಾಯದ ಸೂತ್ರಧಾರನಂತೆ ಇದ್ದವರು ಅಮೋಘವರ್ಷ ನೃಪತುಂಗ ಮಹಾರಾಜರು. ಸ್ವದೇಶಕ್ಕೆ ಧಕ್ಕೆ ಬಂದಾಗ ಸುಮ್ಮನೆ ಕೂರದೆ ಆಕ್ರಮಣಕಾರಿಗಳೊಂದಿಗೆ ಯುದ್ಧ ಮಾಡುತ್ತಿದ್ದರು. ಯುದ್ಧವೆಂಬುದು ರಾಜಧರ್ಮವಾಗಿತ್ತು. ಈ ಧರ್ಮದ ಆಚರಣೆಗೆ ಎಂದೂ ಕುಂದು ತಂದವರಲ್ಲ. ರಾಜ್ಯಾಧಿಪತ್ಯದಂತೆ ಸಾಹಿತ್ಯವೂ ಅವರ ಮನಕ್ಕೆ ಸನಿಹವಾಗಿತ್ತು. ಕ್ರಿ. ಶ. ೮೦೦ರಲ್ಲಿ ಇಡೀ ದಕ್ಷಿಣದ ಜೊತೆಗೆ ಉತ್ತರ ಭಾರತವೂ ಗೋವಿಂದ ನೃಪತಿಯ ಸಾರ್ವಭೌಮತೆಯನ್ನು ಒಪ್ಪಿಕೊಂಡಿತು. ದಂಪತಿ ಸಮೇತರಾಗಿ ತೀರ್ಥಯಾತ್ರೆ ಹೊರಟರು. ಯಾತ್ರೆಯಿಂದ ಹಿಂದಿರುಗಿದ ೧೦ ತಿಂಗಳ ಬಳಿಕ ರಾಣಿ ಗಂಡು ಮಗುವಿಗೆ ತಾಯಿಯಾದಳು. ಈ ಮಗುವಿಗೆ ಅಮೋಘವರ್ಷ ಎಂದು ನಾಮಕರಣ ಮಾಡಿದರು. ಕ್ರಿ. ಶ. ೮೧೪ರಲ್ಲಿ ತಂದೆ ಗೋವಿಂದ ನೃಪತಿಯ ದೇಹ ಅವಸಾನವಾಯಿತು. ಚಕ್ರವರ್ತಿಯಾಗಬೇಕಿದ್ದ ಅಮೋಘವರ್ಷ ಹದಿಮೂರರ ಹಸುಳೆ. ಹಿಂದೆ ಗೋವಿಂದ ರಾಜನಿಂದ ಸೋತು ಸುಣ್ಣವಾಗಿದ್ದವರೆಲ್ಲಾ ಮತ್ತೆ ತಲೆ ಎತ್ತಿದರು. ಆದರೆ ಪ್ರಧಾನ ಮಂತ್ರಿ ಪಾತಾಳಮಲ್ಲ ಮತ್ತು ಸೇನಾಧ್ಯಕ್ಷ ಬಂಕೇಶ ರಾಷ್ಟ್ರಕೂಟ ಸಿಂಹಾಸನಕ್ಕೆ ಬೆಂಗಾವಲಾಗಿ ನಿಂತರು. ಇವರಿಬ್ಬರ ರಾಜನಿಷ್ಠೆ, ಕಾರ್ಯದಕ್ಷತೆ, ರಾಜಪೀಠಕ್ಕೆ ವಜ್ರರಕ್ಷೆಯಾದವು. ಗಂಗರ ಗೂಢಚಾರರಿಂದ ಅಮೋಘವರ್ಷನ ಹತ್ಯೆಗೆ ರೂಪಿಸಿದ ಸಂಚು ವಿಫಲವಾಯಿತು. ಗೋದಾವರಿಯಿಂದ ಕಾವೇರಿಯವರೆಗೆ ನಿಷ್ಕಂಟಕವಾದ ನಾಡಿನಲ್ಲಿ

ಅಮೋಘವರ್ಷನು ಸಿಂಹಾಸನರೂಢನಾದನು. ಮುಂದೆ ಪರಮಾರ ರಾಜಕನ್ಯೆ ಲಕ್ಷ್ಮೀದೇವಿಯೊಡನೆ ವಿವಾಹವಾಯಿತು. ಪ್ರಜಾವತ್ಸಲರಾದ ಇಬ್ಬರೂ ಪ್ರಜೆಗಳಿಗೆ ತಂದೆ ತಾಯಿಗಳೆನಿಸಿದರು. ಇವರ ಅರಮನೆಯನ್ನು ಬೆಳಗಿದ ಮೊದಲ ಶಿಶು ಶಂಖಾದೇವಿ. ಪ್ರಾಪ್ತ ವಯಸ್ಕಳಾದ ಮಗಳನ್ನು ಕರೆದು, "ಮಗಳೇ ನೀನು ಸಾಮಾನ್ಯ ಪ್ರಜೆಯ ಮನೆಯಲ್ಲಿ ಹುಟ್ಟಿದ್ದರೆ ಸುಖವಾಗಿರಬಹುದಿತ್ತೆನೋ, ಆದರೆ ರಾಷ್ಟ್ರಕೂಟರ ಅರಮನೆಯಲ್ಲಿ ಹುಟ್ಟಿರುವುದರಿಂದ ದೇಶದ ಇಷ್ಟಾರ್ಥಗಳ ಜೊತೆಗೆ ನಿನ್ನನ್ನು ಜೋಡಿಸಿಕೊಳ್ಳಬೇಕಾಗಿದೆ. ರಾಜರ ಜೀವನವೆಲ್ಲ ನೆರೆಹೊರೆಯ ಬಂದು ಬಾಂಧವರೊಡನೆ ಯುದ್ಧ ಮಾಡುವುದರಲ್ಲಿಯೇ ಕಳೆದು ಹೋದರೆ ರಾಜತ್ವ ಸಾರ್ಥಕವಾಗುವುದಿಲ್ಲ. ದೇಶದೊಳಗಿನ ಜನರ ಬದುಕು ಹಸನಾಗಬೇಕು, ಏಳಿಗೆ ಹೊಂದಬೇಕು. ಅದಕ್ಕಾಗಿ ನಮಗೆ ಈಗ ಪಲ್ಲವರ ಸ್ನೇಹ ಅಗತ್ಯ. ಪಲ್ಲವರ ರಾಜಕುಮಾರ ನಂದಿವರ್ಮ ರಾಷ್ಟ್ರಕೂಟ ಮನೆತನದ ಅಳಿಯತನಕ್ಕೆ ಯೋಗ್ಯವೆನಿಸುತ್ತದೆ. ನಿನ್ನ ಸಮ್ಮತಿ ಬೇಕು" ಎಂದನು. ಮುಂದುವರೆದು "ನೀನು ಪಲ್ಲವರ ಸೊಸೆಯಾಗಿ ಹೋಗುತ್ತಿರುವುದು ನಿನ್ನೊಬ್ಬಳ ಸಂಸಾರ ಸುಖಕ್ಕಲ್ಲ. ಎರಡು ರಾಜ್ಯ ಮನೆತನಗಳ ಸ್ನೇಹಸಂಬಂಧಕ್ಕಾಗಿ ಮಾತ್ರವಲ್ಲ, ಎರಡೂ ರಾಜ್ಯಗಳ ಗಡಿಗಳ ನಡುವೆ ಬಹುಕಾಲದವರೆಗೆ ರಕ್ತಪಾತವನ್ನು ತಡೆಗಟ್ಟಬಲ್ಲ ಶಾಂತಿಧೂತಳಾಗಿ ನಿಲ್ಲಲು" ಎಂದನು. ಅದರಂತೆ ಪಲ್ಲವ ರಾಜಕುಮಾರ ನಂದಿವರ್ಮನ ಕೈಹಿಡಿದಳು. ರಾಷ್ಟ್ರಕೂಟರ ಗಡಿಗಳ ಚಿಂತೆ ಕಳೆಯಿತು. ಸಾಹಿತ್ಯಾಭಿವೃದ್ಧಿಗೆ ಮನಗೊಟ್ಟನು. ಕನ್ನಡದಲ್ಲಿ 'ಕವಿರಾಜಮಾರ್ಗ' ಅವರ ಲೇಖನಿಯ ಕೊಡುಗೆಯಾಗಿ ಹೊರಬಂದಿತು.

ಪ್ರಶ್ನೆಗಳು :

ಅ. ಮಂತ್ರಿ ಮತ್ತು ಸೇನಾಧ್ಯಕ್ಷರಿಬ್ಬರು ರಾಷ್ಟ್ರಕೂಟರ ಸಿಂಹಾಸನಕ್ಕೆ ಬಂದೊದಗಿದ ಆಪತ್ತನ್ನು ಹೇಗೆ ನಿಭಾಯಿಸಿದರು?

ಆ. ಪಲ್ಲವರೊಂದಿಗೆ ಅಳಿಯತನದ ಸಂಬಂಧ ಮಾಡಲು ಅಮೋಘವರ್ಷ ನಿರ್ಧರಿಸಿದ್ದೇಕೆ?

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 X 5 = 5

44. ನಿಮ್ಮನ್ನು ಹಾವೇರಿ ತಾಲೂಕಿನ ಅಕ್ಕೂರು ಗ್ರಾಮದ ನಿವಾಸಿ 'ಅಪೇಕ್ಷಾ' ಎಂದು ಭಾವಿಸಿಕೊಂಡು, ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವವನ್ನು ಬಗೆಹರಿಸುವಂತೆ ಕೋರಿ ಗ್ರಾಮಪಂಚಾಯತಿಯ ಅಭಿವೃದ್ಧಿ ಅಧಿಕಾರಿಗೆ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಬಸವರಾಜ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ 80ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ವಿವರಿಸಿ, ಧಾರವಾಡದಲ್ಲಿ ವಾಸವಾಗಿರುವ 'ಗಜಾನನ' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 X 5 = 5

45. ಗ್ರಂಥಾಲಯಗಳ ಮಹತ್ವ.

ಅಥವಾ

ಕೃತಕ ಬುದ್ಧಿಮತ್ತೆ (ಎ.ಐ.) ಮತ್ತು ಉದ್ಯೋಗಾವಕಾಶಗಳು.